ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 07-06-2024 ರಂದು ಪ್ರಮಾಣ ಮಾಡಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆ ಃ ಎ ಪಿ ಪಿ ಅವರಿಂದ**

ದಿನಾಂಕ 21.05.2017 ರಂದು ಪೋಲೀಸರು ನನ್ನ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ. ತನಿಖಾಧಿಕಾರಿ ದಿನಾಂಕ 31.10.2017 ರಂದು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ನನ್ನಿಂದ ಪಡೆದುಕೊಂಡಿರುತ್ತಾರೆ. ಕಾಗದ ಪತ್ರಗಳ ಜಪ್ತಿ ಪಂಚಾನಾಮೆಗೆ ನಾನು ಸಹಿ ಮಾಡಿರುತ್ತೇನೆ. ಕಾಗದ ಪತ್ರಗಳ ಜಪ್ತಿ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿ ಸಹಿ ನಿಪಿ-2(ಎ) ಎಂದು ಗುರುತಿಸಲಾಯಿತು. ರಾಘವೇಂದ್ರ ಪಾಟೀಲ ಇವರ ಸಾಲದ ಅರ್ಜಿ ಒಟ್ಟು 8 ಪುಟಗಳು ನಿಪಿ-3 ಎಂದು, ಸಾಲ ಮಂಜೂರ ಮಾಡಿದ ಆದೇಶದ ಮೂಲ ಪ್ರತಿ ಒಟ್ಟು 3 ಪುಟಗಳು ನಿಪಿ-4 ಎಂದು, ಲೋನ ಕಮ್ ಹೈಪೋತಿಕೇಷನ ಅಗ್ರಿಮೆಂಟ್ ಒಟ್ಟು 5 ಪುಟಗಳು ನಿಪಿ-5 ಎಂದು, ಗ್ಯಾರಂಟಿ ಅಗ್ರೀಮೆಂಟ್ ಹಾಗೂ ಇ-ಸ್ಟ್ಯಾಂಪ ಪೇಪರ ಒಟ್ಟು 4 ಪುಟಗಳು ನಿಪಿ-6 ಎಂದು, ರಾಘವೇಂದ್ರ ಇವರ ಮತದಾನದ ಚೀಟಿ, ಆಧಾರ ಕಾರ್ಡ, ಪಾಸ್ ಬುಕ್ಕ, ಡಿಕ್ಲೆರೆಷನ ಪಾರ್ಮ ಹಾಗೂ ಇತರೆ ದಾಖಲೆಗಳು ಒಟ್ಟು 16 ಪುಟಗಳು ನಿಪಿ-7 ಎಂದು, ಕ್ಯಾಶ ರಶೀದಿ ಹಾಗೂ ಇನ್ವಯಸ್ ಒಟ್ಟು 2 ಪುಟಗಳು ನಿಪಿ-8 ಎಂದು, ರಾಘವೇಂದ್ರ ಇವರ ಇನ್‌ಸೂರೆನ್ಸ, ಆರ್ ಸಿ ಹಾಗೂ ಇತರೆ ದಾಖಲೆಗಳ ಪ್ರತಿ ಒಟ್ಟು 2 ಪುಟಗಳು ನಿಪಿ-9 ಎಂದು, ಸಿಬಿಲ್ ವರದಿ ಒಟ್ಟು 4 ಪುಟಗಳು ನಿಪಿ-10 ಎಂದು, ಪಾರಂ ನಂ 26, 29, 30 ಹಾಗೂ ಇತರೆ ದಾಖಲೆಗಳು ಒಟ್ಟು 6 ಪುಟಗಳು ನಿಪಿ-11 ಎಂದು,

ಸಾಲ ನೀಡುವ ಅನುಸರಿಸುವ ಮಾನದಂಡ ಪ್ರತಿ ಒಟ್ಟು 23 ಪುಟಗಳು  ನಿಪಿ-12 ಎಂದು, ಬ್ಯಾಂಕಿ ಸಿಬ್ಬಂದಿ ವಿವರಗಳು ಪ್ರತಿ ನಿಪಿ-13 ಎಂದು, ಪಂಚನಾಮೆ ಸಮಯದಲ್ಲಿ ಪೋಟೋ ತೆಗೆಸಿದ್ದು ಸದರಿ ಪೋಟೋವನ್ನು ನಿಪಿ-14 ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿ ನನ್ನ ಪುರವಣಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ  ಆರೋಪಿತರ ಪರ ವಕೀರಿಂದಃ**

(ಪಾಟೀ ಸವಾಲಿಗ ಕಾಲವಕಾಶ ಕೋರುತ್ತಿದ್ದು, ಕಾಲವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**